ವಿಜಯ ಕರ್ನಾಟಕ

**Monday, January 9, 2012**

# ಎಸ್‌ಜೆಸಿಸಿ ತಂಡಕ್ಕೆ ಗೆಲುವು

**ವಿಕ ಸುದ್ದಿಲೋಕ** ಬೆಂಗಳೂರು

ಶ್ರೀ ಭಗವಾನ್ ಮಹಾವೀರ್ ಜೈನ್ ಕಾಲೇಜು ಆಶ್ರಯದಲ್ಲಿ ನಡೆಯುತ್ತಿರುವ ವೈ ಹಾಕಿ ಚಾಂಪಿಯನ್‌ಷಿಪ್‌ನ ಮೊದಲ ದಿನದ ಪಂದ್ಯದಲ್ಲಿ ಬೆಂಗಳೂರಿನ ಎಸ್‌ಜೆಸಿಸಿ ತಂಡ ಎಸ್‌ಆರ್‌ಎಂ ವಿಶ್ವವಿದ್ಯಾನಿಲಯ ತಂಡದ ವಿರುದ್ಧ ಟೈ ಬ್ರೇಕರ್ ಮೂಲಕ 8-6 ಗೋಲುಗಳ ಅಂತರದಲ್ಲಿ ರೋಚಕ ಜಯ ಸಾಧಿಸಿದೆ.

ನಿಗದಿತ ಅವಧಿಯಲ್ಲಿ ಉಭಯ ತಂಡಗಳು 4-4 ಗೋಲುಗಳ ಅಂತರದಿಂದ ಸಮಬಲ ಸಾಧಿಸಿದ್ದವು.

ಎಸ್‌ಜೆಸಿಸಿ ತಂಡದ ಪರ ಪಿ.ಯು. ಕುಟ್ಟಪ್ಪ (4ನೇ ನಿಮಿಷ), ಶಾನ್ ಬೋಪಯ್ಯ (14 ಮತ್ತು 17ನೇ ನಿಮಿಷ), ಧನುಷ್ ನಾಣಯ್ಯ (24ನೇ ನಿಮಿಷ) ಗೋಲು ದಾಖಲಿಸಿದರು. ಎಸ್.ಆರ್.ಎಂ. ವಿಶ್ವವಿದ್ಯಾನಿಲಯದ ಪರ ಶಿವಮಣಿ 21, 22, 38 ಮತ್ತು 42ನೇ ನಿಮಿಷಗಳಲ್ಲಿ ಗೋಲು ದಾಖಲಿಸಿದರೂ ತಂಡವನ್ನು ಸೋಲಿನಿಂದ ಪಾರು ಮಾಡಲಾಗಲಿಲ್ಲ.

ದಿನದ ಎರಡನೇ ಪಂದ್ಯದಲ್ಲಿ ಶ್ರೀಲಂಕಾದ ರಾಯಲ್ ಕಾಲೇಜು ತಂಡ ಜೈನ್ ಎಂಜಿನಿಯರಿಂಗ್ ಕಾಲೇಜು ವಿರುದ್ಧ 8-0 ಗೋಲುಗಳ ಅಂತರದಲ್ಲಿ ಬೃಹತ್ ಜಯ ಸಾಧಿಸಿದೆ. ಶ್ರೀಲಂಕಾ ತಂಡದ ಪರ ಧನುಜ್ (4 ಮತ್ತು 34ನೇ ನಿಮಿಷ), ಶಹೀಲ್ (5ನೇ ನಿಮಿಷ), ಮಾಲಿಥ್ರಾ (17ನೇ ನಿಮಿಷ), ಉವೈಸ್ (32 ಹಾಗೂ 42ನೇ ನಿಮಿಷ) ಹಾಗೂ ಸುಸಂಗ (38 ಮತ್ತು 48ನೇ ನಿಮಿಷ) ಜಯ ತಂದಿತ್ತರು.

ಮೂರನೇ ಪಂದ್ಯದಲ್ಲಿ ಅಣ್ಣಾ ಮಲೈ ವಿಶ್ವವಿದ್ಯಾನಿಲಯ ಬೆಂಗಳೂರಿನ ಸೇಂಟ್ ಜೋಸೆಫ್ ಕಲಾ ಮತ್ತು ವಿಜ್ಞಾನ ಕಾಲೇಜಿನ ವಿರುದ್ಧ 5-1 ಗೋಲುಗಳ ಅಂತರದಲ್ಲಿ ಜಯ ಸಾಧಿಸಿತು.

ಅಣ್ಣಾ ಮಲೈ ತಂಡದ ಪರ ಅರವಿಂದ್ (5 ಮತ್ತು 10ನೇ ನಿಮಿಷ), ಮುದ್ದಪ್ಪ (6ನೇ ನಿಮಿಷ), ಪೌಲ್‌ಸಾ (16 ಮತ್ತು 36ನೇ ನಿಮಿಷ) ಗೋಲು ದಾಖಲಿಸಿದರು. ಬೆಂಗಳೂರು ತಂಡದ ಪರ ಚೆಂಗಪ್ಪ 28ನೇ ನಿಮಿಷದಲ್ಲಿ ಏಕೈಕ ಗೋಲು ದಾಖಲಿಸಿ ಸೋಲಿನ ಅಂತರವನ್ನು ಕಡಿಮೆ ಮಾಡಿದರು.